# ಅಮ್ಮನಿಲ್ಲದ ಆ ಹೊತ್ತು...

ಮುಂಜಾನೆ 10 ಗಂಟೆಯ ಸಮಯ. ಹುಷಾರಿಲ್ಲದೆ ಮಲಗಿದ್ದ ನನ್ನ ತಾಯಿ ಕೆಮ್ಮುತ್ತಾ ನನ್ನ ಕೈ ಹಿಡಿದು ಹಿತ್ತಲ ತೆಂಗಿನ ಮರದ ಬಳಿ ಬರಲು ಕೆಮ್ಮು ಜೋರಾಗಿ ವಾಂತಿ ಮಾಡಲು ಪ್ರಯತ್ನಿಸುತ್ತಾ ಕುಸಿದುಬಿದ್ದರು.

ಅಮ್ಮಾ... ಅಮ್ಮಾ... ಎಂದು ನಾನು ಚೀರಲು ಒಳಗಿದ್ದ ಅಪ್ಪ, ಅಣ್ಣ, ದೊಡ್ಡಮ್ಮ ಎಲ್ಲರೂ ಓಡೋಡಿ ಬಂದು ಎತ್ತಿಕೊಂಡು ವರಾಂಡಕ್ಕೆ ತಂದರು. ಅಯ್ಯೊ ಆಸ್ಪತ್ರೆಗೆ ಹೋಗಬೇಕು, ಹೇಗೆ ಹೋಗುವುದು? ಹಳ್ಳಿ ನಮ್ಮೂರು. ಪಟ್ಟಣಕ್ಕೆ ಹೋಗುವ ಬಸ್ ಹಿಡಿಯಲು, ಆಸ್ಪತ್ರೆ ಇರುವ ಜಾಗ ಸಂತೆ ನಡೆಯುವ ಸ್ಥಳಕ್ಕೆ ಹೋಗಲು ಮೂರು ಮೈಲಿ ನಡೆದು ಹೋಗಬೇಕು. ಆಗ ಮೊಬೈಲ್ ಇರದ ಕಾಲ. ಹಾಗೂ ಹೀಗೂ ಒಂದು ವಾಹನ ಬಂತು. ಅಷ್ಟರಲ್ಲಿ ನನ್ನ ಅಮ್ಮನ ಉಸಿರು ನಿಂತಿತ್ತು.

ನನ್ನ ಕೈಯಲ್ಲೇ ಉಸಿರು ಹೋಗಿದ್ದು ನನಗೆ ತಿಳಿದಿರಲಿಲ್ಲ. ಎದುರು ಮನೆ ಅಜ್ಜಿ ಬಂದು ಉಸಿರಾಡುತ್ತಿಲ್ಲ ಜೀವ ಹೋಗಿದೆ ಎಂದಾಗ ತಿಳಿಯಿತು ಅಮ್ಮ ಸತ್ತು ಹೋಗಿದ್ದಾರೆ... ಆ ನೋವು, ಆ ದುಃಖ, ಯಾತನೆ ಆ ದಿನದಷ್ಟೇ ಇವತ್ತಿಗೂ ಹಚ್ಚ ಹಸಿರಾಗಿದೆ. ಅಮ್ಮನ ಅಕ್ಕತಂಗಿಯರು, ಅವರ ಮಕ್ಕಳು, ಅಪ್ಪನ ಕಡೆಯವರು ನನ್ನ ಅಮ್ಮನ ದೊಡ್ಡ ಮಗಳು, ಅಳಿಯ ಇತ್ಯಾದಿ ನೆಂಟರೆಲ್ಲ ಬಂದು ಪಾರ್ಥಿವ ಶರೀರದ ಸ್ನಾನ ಪೂಜೆ ವಿಧಿ ಕರ್ಮಗಳನ್ನೆಲ್ಲ ಮುಗಿಸಿ ಹೂಳುವ ಸಮಯ ಸಂಜೆ ಸೂರ್ಯ ಬಾನಿನ ಒಳಹೊಕ್ಕು ಬಾನೆಲ್ಲಾ ಕೆಂಪಾಗಿದ್ದ ಹೊತ್ತು. ಅಮ್ಮ... ಅಮ್ಮಾ... ಎಂದು ಅತ್ತು ಅತ್ತೂ ಬಸವಳಿದಿದ್ದ ನನ್ನನ್ನು ಮನೆಗೆ ಕರೆತಂದು ಬಿಟ್ಟಾಗ ಮನೆ ಮನಸ್ಸು ಖಾಲಿ ಖಾಲಿ.

ಅಮ್ಮ ತೋರುವ ಪ್ರೀತಿಯ ಒಂದಂಶ ಪ್ರೀತಿ ತೋರುವ ಒಬ್ಬರೂ ಅಲ್ಲಿರಲಿಲ್ಲ. ಶಾಲಾ ರಜಾ ದಿನಗಳಲ್ಲಿ ಅವರ ಮನೆಗೆ ಹೋದಾಗ ತುಂಬಾ ಪ್ರೀತಿ ಮಮತೆ ತೋರುತ್ತಿದ್ದ ಚಿಕ್ಕಮ್ಮ ದೊಡ್ಡಮ್ಮ ಶವಸಂಸ್ಕಾರ ಮಾಡಿದ ಸ್ಥಳದಿಂದಲೇ ಅವರ ಮನೆಗಳಿಗೆ ಹೊರಟು ಹೋಗಿದ್ದರು. ಅಮ್ಮನಿಲ್ಲದ ಮೊದಲ ರಾತ್ರಿ ಚಿಕ್ಕಮ್ಮನ ಬಳಿ ಮಲಗಬೇಕೆಂದು ನಾನಂದುಕೊಂಡಿದ್ದೆ. ಆದರೆ ಅವರು ಬಂದಿರಲಿಲ್ಲ. ಅವರು ತೋರುತ್ತಿದ್ದ ಪ್ರೀತಿ ಮೇಲ್ನೋಟದ್ದು, ಯಾರಿಗೆ ಯಾರೂ ಇಲ್ಲ, ನನಗೆ ನಾನೇ, ಅಮ್ಮನಿಲ್ಲದ ಪ್ರಪಂಚವನ್ನು ನಾನು ನೋಡುವ ದೃಷ್ಟಿಕೋನ, ಪ್ರಪಂಚ ನನ್ನನ್ನು ನೋಡುವ ದೃಷ್ಟಿಕೋನ ಬದಲಾಗಿ ತಿಳಿದು ತಿಳಿಯದ ಹಲವು ನಿರ್ಧಾರಗಳೊಂದಿಗೆ ಅಮ್ಮ ಕಲಿಸಿದ ನೈತಿಕ ನೆಲೆಗಟ್ಟಿನ ಮೇಲೆ ಜೀವನ ಕಟ್ಟಿಕೊಂಡಿದ್ದೇನೆ. ಆ ಕ್ಷಣಗಳು ನನ್ನ ಬದುಕಿನ ಪರೀಕ್ಷೆಯ ಕಾಲ ಎಂದೇ ನಾನು ಭಾವಿಸಿದ್ದೇನೆ.

—ಸರೋಜ ಎಂ.ಎಸ್., ಸಾಗರ



# ಮಹಾಮಾರಿ ಒಡ್ಡಿದ ಪರೀಕ್ಷೆ


ಎಲ್ಐಸಿ ನೌಕರನಾದ ನಾನು ಬಡ್ತಿ ಹೊಂದಿ ಚೆನ್ನೈಗೆ ತೆರಳಿದೆ. ಅಕ್ಕರೆಯ ಮಡದಿ, ಮುದ್ದಾದ ಮಕ್ಕಳು, ಪ್ರೀತಿಯ ಅಮ್ಮ. ಸ್ವರ್ಗಕ್ಕೆ ಕಿಚ್ಚು ಹಚ್ಚುವ ಸಂಸಾರ. ಬರಲಿರುವ ಘೋರ ದಿನಗಳ ಸುಳಿವಿಲ್ಲದೆ ನಲಿಯುತ್ತಿದ್ದ ದಿನಗಳವು...

ಆ ಕರಾಳ ದಿನ. ಶಾಲೆಯಿಂದ ಹಿಂದಿರುಗಿದ ಹಿರಿಯ ಮಗಳಿಗೆ ಸೀನು ಕೆಮ್ಮು... ತಪಾಸಣೆ ಮಾಡಿಸಿದೆ. ಸ್ವೈನ್ ಫ್ಲೂ ವಕ್ಕರಿಸಿತ್ತು. ಜಂಘಾಬಲವೇ ಉಡುಗಿಹೋಯ್ತು. ಅದು ಮಹಾಮಾರಿ ಆರ್ಭಟದ ಕಾಲ. ಎಲ್ಲೆಲ್ಲೂ ಸಾವು ನೋವಿನ ಕರಾಳ ಸುದ್ದಿಗಳೇ. ಔಷಧಿಯೂ ಸುಲಭ ಸಿಗದು. ಸಹೋದ್ಯೋಗಿಗಳ ಸಹಾಯದಿಂದ ಆಸ್ಪತ್ರೆಗೆ ಸೇರಿಸಿದೆ. ನನಗೂ ಸೋಂಕು ತಗಲುವ ಸಾಧ್ಯತೆ ಇತ್ತು. ಮನೆಗೆ ಬರಲು ಭಯ, ಉಳಿದವರಿಗೂ ಸೋಂಕು ತಗುಲುವುದೆಂಬ ಆತಂಕ. ಧೈರ್ಯದಿಂದ ಎದುರಿಸಬೇಕೆಂಬ ಸಂಕಲ್ಪ ಮಾಡಿದೆ. ರಾತ್ರೋ ರಾತ್ರಿ ಟ್ಯಾಕ್ಸಿ ಮಾಡಿ ಮೂವರನ್ನೂ ಮೈಸೂರಿಗೆ ಕಳುಹಿಸಿದೆ, ಅವರ ಪ್ರಾಣವಾದರೂ ಉಳಿಯಲಿ ಅಂತ.

ಉಪಾಯ ಚೆನ್ನಾಗಿತ್ತು. ಆದರೆ ಲೆಕ್ಕಾಚಾರ ತಪ್ಪಾಗಿತ್ತು. ಕಿರಿಯ ಮಗಳಿಗೂ ಈಗಾಗಲೇ ಸೋಂಕು ತಗುಲಿತ್ತು. ಮೈಸೂರಿನಲ್ಲಿ ಅವಳನ್ನು ಆಸ್ಪತ್ರೆಗೆ ಸೇರಿಸಿ ರಕ್ಷಿಸುವ ಹೊಣೆ ನನ್ನ ಅಣ್ಣನ ಪಾಲಿಗೆ ಬಿತ್ತು. ಎಂತಹ ಘೋರ ಪರಿಸ್ಥಿತಿ! ಕೆಲವೇ ದಿನಗಳ ಹಿಂದೆ ಸುಖೀ ಸಂಸಾರ, ಇಂದು ಮಕ್ಕಳ ಪ್ರಾಣಕ್ಕಾಗಿ ಪ್ರಲಾಪಿಸುವಂತಾಯ್ತು. ನಿಜಕ್ಕೂ ನನ್ನ ಮನಸ್ಸನ್ನು ಪರೀಕ್ಷೆಗೊಳಪಡಿಸಿದ ದಿನಗಳವು.

ನಿರಾಶೆಯ ಕಾರ್ಮೋಡದಲ್ಲಿ ಬೆಳ್ಳಿಗೆರೆ ಕಾಣಿಸಿತು. ದಿವ್ಯೌಷಧ ಟ್ಯಾಮಿಫ್ಲೂ ಗುಳಿಗೆಗಳು ದೊರೆಯತೊಡಗಿತು. ಕೆಂಪಗಿದ್ದ ಮಕ್ಕಳ ಕಣ್ಣುಗಳು ತಿಳಿಯಾಗತೊಡಗಿದವು. ಮರುಜನ್ಮ ಪಡೆದ ಖುಷಿಯಲ್ಲಿ ನಮ್ಮ ಸುಖ ಇಮ್ಮಡಿಯಾಯ್ತು. ಮುಂದಿನ ಮೂರು ವರ್ಷಗಳು ಚೆನ್ನೈನಲ್ಲಿಯೇ ಆನಂದದ ಜೀವನ ನಡೆಸಿದೆವು. ನಮಗೆ ಒದಗಿ ಬಂದ ವಿಪತ್ತು, ಹೊರಬಂದ ರೀತಿ ನೆನೆದರೆ ಈಗಲೂ ಮೈ ಜುಂ ಎನ್ನುತ್ತದೆ.

—ಅಮಚವಾಡಿ ಹರಿದಾಸ



## ನಮ್ಮ ಸುತ್ತಲಿನ ಸಾಧಕಿಯರು

ನಮ್ಮ ಸುತ್ತಮುತ್ತಲೂ, ಹಲವಾರು ಅಡೆತಡೆಗಳನ್ನು ದಾಟಿ, ತಮ್ಮ ಕ್ಷೇತ್ರಗಳಲ್ಲಿ ಗೆಲುವು ಪಡೆದಿರುವ ಯಶಸ್ವಿನಿಯರು ಇರುತ್ತಾರೆ. ಎಲೆಮರೆ ಕಾಯಿಯಂತೆ ದುಡಿಯುತ್ತಿರುವ ಸಾಧಕಿಯರು ನಿಮ್ಮ ಸುತ್ತಲಿದ್ದರೆ ಸಣ್ಣದೊಂದು ಪರಿಚಯ ಬರೆದು ಕಳುಹಿಸಿ. ಅವರ ಸಂಘರ್ಷ, ಉಳಿದವರಿಗೆ ಸ್ಫೂರ್ತಿಯಾಗಬಹುದು. ಪ್ರೇರಣೆ ನೀಡುವಂಥ ಸಾಧಕಿಯರನ್ನು ಪರಿಚಯಿಸಿದರೆ ಆಯ್ದ ಕೆಲವನ್ನು ಪ್ರಕಟಿಸಲಾಗುವುದು. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಗಳ ಮಿತಿಯಲ್ಲಿರಲಿ. ಕೊನೆಯ ದಿನಾಂಕ ಏಪ್ರಿಲ್ 2. ಇಮೇಲ್–**editorsu@sudha.co.in**

